15. ಸ್ಟೆರ್ಲಿಂಗ್ ಲ್ಯಾಂಬ್, ಬೆಂಗಳೂರು	-	1,15,42,625	-
16. ಸಿಮಿ ಫಾರ್ಮಾಸ್ಯೂಟಿಕಲ್ಸ್, ಬೆಂಗಳೂರು	-	26,03,877	-
17. ವೀನಸ್ ರೆಮೀಡೀಸ್ ಲಿಮಿಟೆಡ್, ಚಂಡೀಘಡ್	-	8,88,022	-
18. ವೈಶಾಲಿ ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್, ಕೊಚ್ಚಿನ್	-	17,36,751	-
19. ಆರೈಸ್ ಆಗ್ರೋ-ವೆಟ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು	-	-	25,28,500
20. ಸರಾಭಯ್ ಜೈಡಸ್ ಅನಿಮಲ್ ಹೆಲ್ತ್ ಪ್ರೈ. ಲಿಮಿಟೆಡ್, ಬೆಂಗಳೂರು	-	-	85,69,600
ಒಟ್ಟು	ಇಲ್ಲ	3,29,97,871	4,08,76,650

ಸಿಂಧನೂರು ಕ್ಷೇತ್ರದಲ್ಲಿ ಬಾಂಗ್ಲದೇಶದ ನಿರಾಶ್ರಿತರ ಬಗ್ಗೆ

1099 (1896) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧನೂರು ಕ್ಷೇತ್ರದಲ್ಲಿ ಬಾಂಗ್ಲದೇಶದಿಂದ ಬಂದ ನಿರಾಶ್ರಿತ ಪರಿಶಿಷ್ಟ ಜಾತಿ ಜನರಿಗೆ ಜಾತಿ ಪ್ರಮಾಣ ಪತ್ರ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಇವರಿಗೆ ವಿಶೇಷ ನಾಗರೀಕ ಮೂಲಭೂತ ಸೌಲಭ್ಯಗಳಾದ ರಸ್ತೆ ಅಭಿವೃದ್ಧಿ ಪಡಿಸುವುದು, ಕುಡಿಯುವ ನೀರಿನ ವ್ಯವಸ್ಥೆ ಹಾಗು ವಿಶೇಷವಾದ ವಸತಿ ಯೋಜನೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಭಾರತ ಸರ್ಕಾರವು ಕಾಲಕಾಲಕ್ಕೆ ಅನುಸಾರವಾಗಿ ಪ್ರಕಟಿಸಲಾದ ಪ.ಜಾತಿ ಪ.ಪಂಗಡಗಳ ಪಟ್ಟಿಯು ಭಾರತೀಯ ಪೌರತ್ವ ಪಡೆದಿರುವವರಿಗೆ ಅನ್ವಯಿಸುವುದು. ಬಾಂಗ್ಲದೇಶದಿಂದ ಬಂದ ನಿರಾಶ್ರಿತರು ವಿದೇಶಿಯರಾಗಿದ್ದು ಪ.ಜಾತಿ ಪ್ರಮಾಣಪತ್ರ ಅವರಿಗೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಯಾವುದೇ ನಿರ್ದಿಷ್ಟವಾದ ಅಭಿವೃದ್ಧಿ ಕೆಲಸಗಳು ಅವರಿಗಾಗಿಯೇ ಪ್ರತ್ಯೇಕವಾಗಿ ಪರಿಗಣಿಸುತ್ತಿಲ್ಲ.

ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿ ಕಾರ್ಮಿಕರಿಗೆ ಆರ್ಥಿಕ ಸೌಲಭ್ಯ

1100 (519) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ಸ್ ಮಿಲ್ ಕಾರ್ಮಿಕರಿಗೆ ಲಭ್ಯವಿರುವ ಆರ್ಥಿಕ ಸೌಲಭ್ಯ ನೀಡಲಾಗಿದೆಯೇ ?